## ನಾದ ಹೊಮ್ಮಿಸುವ ಧರಣೇಂದ್ರ

ಕ್ರಿ.ಶ. 1077ರಲ್ಲಿ ಸಾಂತರ ರಾಣಿ ಚಟ್ಟಲದೇವಿ ಹುಂಚದಲ್ಲಿ ಕಟ್ಟಿಸಿದ ಪಂಚ ಬಸದಿಯಲ್ಲಿರುವ ಧರಣೇಂದ್ರಸ್ವಾಮಿ ವಿಗ್ರಹವನ್ನು ನಿಧಾನವಾಗಿ ತಟ್ಟಿದರೆ ಸಂಗೀತದ ನಾದ ಹೊಮ್ಮುವುದು. ಹಂಪಿಯಲ್ಲಿ ಕೃಷ್ಣದೇವರಾಯ ವಿಜಯ ವಿಠಲ ದೇವಸ್ಥಾನ ಕಟ್ಟಿಸುವುದಕ್ಕಿಂತ ಸುಮಾರು 350 ವರ್ಷಗಳಿಗಿಂತ ಮೊದಲೇ ಈ ನಾದ ಹೊಮ್ಮುವ ವಿಗ್ರಹವನ್ನು ಕೆತ್ತಲಾಗಿರುವುದು ಒಂದು ವಿಶೇಷ.

**-ನ. ಸುರೇಶ ಕಲ್ಕೆರೆ, ಕೊಪ್ಪ**





## ಮರದ ಏತ

ವಿದ್ಯುತ್ತಿನ ಅಭಾವವಿರುವ ಹಳ್ಳಿಗಳಲ್ಲಿ ಗದ್ದೆ, ತೋಟಗಳಿಗೆ ಬೇಸಿಗೆಯಲ್ಲಿ ನೀರು ಹಾಯಿಸಬೇಕಾಗುತ್ತದೆ. ಆಗ ಮರದ ಏತಗಳನ್ನು ಉಪಯೋಗಿಸುತ್ತಿದ್ದರು. ನೀರು ಹರಿಯುತ್ತಿರುವ ಹಳ್ಳದ ಒಂದು ಬದಿಗೆ ಎರಡು ಕಂಬಗಳನ್ನು ಊರಿ, ಮತ್ತೊಂದು ಕಂಬವನ್ನು ಅಡ್ಡಲಾಗಿ ಕಟ್ಟುತ್ತಾರೆ. ಆ ಅಡ್ಡಗೋಲಿನ ಮೇಲೆ ತೋರಿಸಿದ ಮರದ ಉಪಕರಣವನ್ನು ನೇತಾಡಿಸುತ್ತಾರೆ. ಅದು ಎರಡು ಬದಿಗೂ ಸುಲಭವಾಗಿ ವಾಲುತ್ತದೆ. ನಂತರ ಅದನ್ನು ನೀರಿನೊಳಗೆ ಮುಳುಗಿಸಿ ಸ್ವಲ್ಪ ಬಲಪ್ರಯೋಗ ಮಾಡಿ ಕೈಯಿಂದ ಒತ್ತಿದರೆ ಆ ಮರಿಗೆಯು ನೀರನ್ನೆತ್ತಿಕೊಂಡು ಬಂದು ಮೇಲೆ ಸುರಿಯುತ್ತದೆ. ಆ ನಂತರ ನೀರು ಹರಿದು ಹೋಗಲು ತೋಡುಗಳನ್ನು ಮಾಡಿ ಎಲ್ಲಿಗೆ ಬೇಕೋ ಅಲ್ಲಿಗೆ ನೀರನ್ನು ಹಾಯಿಸುತ್ತಾರೆ. ವಿದ್ಯುತ್ತಿನ ಖರ್ಚಿಲ್ಲದೆ ಕಾರ್ಯ ನಿರ್ವಹಿಸುವ ಈ ನೀರಾವರಿ ಪಂಪ್‌ಸೆಟ್ ಪರಿಸರ ಸ್ನೇಹಿಯೂ ಹೌದು.

**-ಪುಷ್ಪಾ ಎನ್.ಕೆ. ರಾವ್, ಉಡುಪಿ**

## ಕಲಾ ನೈಪುಣ್ಯ

ಎರಡು ನಾಗರಹಾವುಗಳು ಒಂದಕ್ಕೊಂದು ಹೆಣೆದುಕೊಂಡಿರುವಂತೆ ಈ ಶಿಲ್ಪವನ್ನು ಅದ್ಭುತವಾಗಿ ಕೆತ್ತಲಾಗಿದೆ. ಕಲಾ ನೈಪುಣ್ಯದಿಂದ ಕೂಡಿದ ಈ ಶಿಲ್ಪ ಚುಂಚನಕಟ್ಟೆಯ ಶ್ರೀರಾಮ ದೇವರ ದೇವಾಲಯದ ದ್ವಾರದ ಎಡ ಮತ್ತು ಬಲ ಭಾಗದ ಗೋಡೆಗಳಲ್ಲಿದೆ.

**-ಕೆ.ಎನ್. ಪ್ರಭಾಕರ ಗುಪ್ತ, ಹಾಸನ**

